8412

Register Number | | | | | | |

# Language — KANNADA — Paper II

**( Non-detailed text, Composition, Grammar )**

Time Allowed : 2 $\frac{1}{2}$ Hours ] [ Maximum Marks : 100

I. ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ : $4 \times 5 = 20$

a) ತನ್ನ ರಾಜ್ಯಕ್ಕೆ ಬರಬೇಕೆಂದು ವಿಷ್ಣುವರ್ಧನನು ಕೇಳಿದಾಗ ಜಕಣಾಚಾರಿಯು ಕೊಟ್ಟ ಉತ್ತರವೇನು ?

b) ವಿಷ್ಣುವರ್ಧನ ಮತ್ತು ಶಾಂತಲೆಯರ ವಿವಾಹ ಸಂಬಂಧದಲ್ಲಿ ಬಪ್ಪರಸನು ವಹಿಸಿದ ಪಾತ್ರವೇನು ?

c) ಯುದ್ಧ ಒದಗಿದಾಗ ಅದರ ವೆಚ್ಚಕ್ಕಾಗಿ ಶಾಂತಲೆ ಮಾಡಿದ ತ್ಯಾಗವೇನು ?

d) ವಿಷ್ಣುವರ್ಧನನು ಶಿವಗಂಗೆಗೆ ಕಳುಹಿಸಿದ್ದ ಚಿತ್ರಪಟಗಳ ಬಗೆಗೆ ಶಾಂತಲೆ ನೀಡಿದ ಸಲಹೆ ಏನು ?

e) ಶಾಂತಲೆಯು ರಾಜಮಾತೆ ಏಚಲಾದೇವಿಯವರಿಗೆ ಮೆಚ್ಚುಗೆಯಾದ ಬಗೆ ಹೇಗೆ ?

f) ಜಕಣಾಚಾರಿಯ ಆಶ್ರಮಕ್ಕೆ ಹೋಗಲು ವಿಷ್ಣುವರ್ಧನನನ್ನು ಶಾಂತಲೆ ಒಪ್ಪಿಸಿದ ಬಗೆ ಹೇಗೆ ?

II. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ : $1 \times 15 = 15$

a) ಸಂಪರ್ಕ ಮಾಧ್ಯಮಗಳು

b) ಚಂಡಮಾರುತಗಳು

c) ಗ್ರಂಥಾಲಯ

III. ನಿಮ್ಮ ಶಾಲೆಗೆ ಅಗತ್ಯವಾಗಿ ಬೇಕಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವಂತೆ ಕೋರಿ ನಿಮ್ಮ ಪಂಚಾಯತ್ ಮಂಡಲಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ. $1 \times 10 = 10$

ಅಥವಾ

ನಿಮ್ಮ ಶಾಲೆಯಲ್ಲಿ ಕೈಗೊಂಡಿದ್ದ ಶೈಕ್ಷಣಿಕ ಪ್ರವಾಸದ ಬಗ್ಗೆ ನಿಮ್ಮ ಅನಿಸಿಕೆ ಕುರಿತು ನಿಮ್ಮ ಮಿತ್ರನಿಗೆ ಒಂದು ಪತ್ರ ಬರೆಯಿರಿ.

[ ವಿ.ಸೂ. ಪತ್ರ ಲೇಖನದಲ್ಲಿ '**X**' ಎಂದು ಸಹಿ ಮಾಡಿ. ನೀವು ನಿಮ್ಮ ಹೆಸರು, ರಿ. ನಂ. ಅಥವಾ ವಿಳಾಸವನ್ನು ಬರೆದಲ್ಲಿ ನಿಮ್ಮ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ. ]

[ Turn over

IV. ಈ ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ : $5 \times 2 = 10$

ಮನುಷ್ಯ ಸಮಾಜ ಜೀವಿ. ತನ್ನ ವಿವೇಕ ಮತ್ತು ಬುದ್ಧಿಶಕ್ತಿಗಳನ್ನು ಬಳಸಿಕೊಳ್ಳುವುದರ ಮೂಲಕ ಅವನು ಇತರ ಪ್ರಾಣಿಗಳಿಂದ ಭಿನ್ನನಾಗಿದ್ದಾನೆ. ಶಿಕ್ಷಣ ಹೆಚ್ಚಿದ ಹಾಗೆ ಮನುಷ್ಯ ನಾಗರಿಕನಾಗುತ್ತಾನೆ. ಇಂದಿನ ನಾಗರಿಕ ಪ್ರಪಂಚದಲ್ಲಿ ವ್ಯಕ್ತಿ ಪ್ರಸಿದ್ಧಿಗೆ ಬರಬೇಕಾದರೆ ಅವನು ವಿದ್ಯಾವಂತನಾಗಬೇಕು. ಬದುಕನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಅತಿ ಮಹತ್ವದ್ದಾಗಿರುತ್ತದೆ. ಶಿಕ್ಷಣದಲ್ಲಿ ಮಾತು ಮತ್ತು ಬರಹ ಎರಡು ಸ್ಪಷ್ಟವಾದ ರೂಪು ಪಡೆದಿರುತ್ತದೆ. ಮನುಷ್ಯನಿಗೆ ಮಾತು ಮಾತ್ರ ಸಾಕಾಗುವುದಿಲ್ಲ, ಅಕ್ಷರ ಜ್ಞಾನದ ಅವಶ್ಯಕತೆಯೂ ಇದೆ. ಅಕ್ಷರ ಕಲಿಕೆಯನ್ನು ಬರಹ ಎನ್ನುತ್ತಾರೆ. ಅಕ್ಷರ ಕಲಿಕೆಯ ಜೊತೆಗೆ ಶಿಕ್ಷಣ ದೊರೆತರೆ ಅದನ್ನು ಸಾಕ್ಷರತೆ ಎನ್ನುವರು. ದೇಶದ ಪ್ರಗತಿಗೆ, ಸಾಧನೆಗೆ ವಿದ್ಯಾವಂತ ಪ್ರಜೆಗಳಿರಬೇಕು. ಪ್ರಜಾಪ್ರಭುತ್ವ ಸಫಲವಾಗಬೇಕಾದರೆ ಸುಶಿಕ್ಷಿತ ಮತದಾರರಿರಬೇಕು. ಆದ್ದರಿಂದ ಸರಕಾರ ಸಾಕ್ಷರತಾ ಯೋಜನೆಗೆ ಹೆಚ್ಚಿನ ಗಮನ ಕೊಡುತ್ತಿದೆ.

ಪ್ರಶ್ನೆಗಳು :

a) ಮನುಷ್ಯ ಪ್ರಾಣಿವರ್ಗಕ್ಕಿಂತ ಹೇಗೆ ಭಿನ್ನನಾಗಿದ್ದಾನೆ ?

b) ವ್ಯಕ್ತಿ ಪ್ರಸಿದ್ಧಿಗೆ ಬರುವುದು ಹೇಗೆ ಸಾಧ್ಯ ?

c) ಸಾಕ್ಷರತೆ ಎಂದರೇನು ?

d) ಪ್ರಜಾಪ್ರಭುತ್ವ ಸಫಲವಾಗುವುದು ಹೇಗೆ ?

e) ಬದುಕನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಮಹತ್ತರವಾದುದು. ಹೇಗೆ ?

V. a) ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ಲಿಂಗ, ವಚನ, ವಿಭಕ್ತಿಗಳನ್ನು ಬರೆಯಿರಿ : $5 \times 1 = 5$

1) ಭೀಮನಿಗೆ 2) ಅಜ್ಜಿಯಿಂದ

3) ರಾತ್ರಿಯಲ್ಲಿ 4) ರಾಣಿಯ

5) ಶಾಲೆಯನ್ನು 6) ಗುರುಗಳು

7) ದೇವರೇ

b) ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : $5 \times 1 = 5$

1) ವೀರ 2) ನನ್ನಿ

3) ಸಜ್ಜನರು 4) ಅನುಭವ

5) ಪ್ರೀತಿ 6) ಕನಸು

7) ಮೌನ

c) ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪದಗಳನ್ನು ಬಿಡಿಸಿ, ಸಂಧಿಯ ಹೆಸರನ್ನು ಬರೆಯಿರಿ : $5 \times 2 = 10$

1) ದಿಗ್ವಿಜಯ 2) ನನ್ನದೆನಿಸಿತು

3) ಗುಣಾದರ್ಶ 4) ಕೋಸಲೇಶ್ವರ

5) ಪ್ರತ್ಯುಪಕಾರ 6) ಒಂದುಗೂಡಿದ

7) ಲೋಕಾನುಭವ

d) ಕರ್ಮಧಾರೆಯ ಸಮಾಸ ಅಥವಾ ಬಹುವ್ರೀಹಿ ಸಮಾಸವನ್ನು ಉದಾಹರಣೆ ಸಹಿತ ವಿವರಿಸಿ. $1 \times 5 = 5$

e) ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ತತ್ಸಮ-ತದ್ಭವಗಳನ್ನು ಬರೆಯಿರಿ : $5 \times 1 = 5$

1) ರತ್ನ 2) ಸ್ನೇಹ

3) ಕಾವ್ಯ 4) ಅಚ್ಚರಿ

5) ವಿದ್ಯೆ 6) ಕ್ಷಣ

7) ವನ

f) ಈ ಕೆಳಗಿನವುಗಳಲ್ಲಿ ಯಾವುದಾದರೂ ಐದನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿ : $5 \times 1 = 5$

1) ಭವಿಷ್ಯ 2) ಪೂರ್ವಿಕರು

3) ಆಶ್ಚರ್ಯ 4) ಬೇವುಬೆಲ್ಲ

5) ಉತ್ಸಾಹ 6) ನಿಸರ್ಗ

7) ಭಕ್ತಿ

VI. ಅರ್ಥಾಲಂಕಾರ ಅಥವಾ ಶಬ್ದಾಲಂಕಾರವನ್ನು ಉದಾಹರಣೆ ಸಹಿತ ವಿವರಿಸಿ. $1 \times 5 = 5$

VII. ತ್ರಿಪದಿಯ ಲಕ್ಷಣವನ್ನು ಬರೆದು, ಉದಾಹರಣೆ ಕೊಡಿ. $1 \times 5 = 5$